ಓ.ಎಸ್ ನಂ. 134/2021

ಪಿ. ಡಬ್ಲ್ಯೂಃ 1

**ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 01-08-2025 ರಂದು ಬೊಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಶ್ರೀ ಜಿ ಪಿ ಟಿ ನ್ಯಾಯವಾದಿರವರಿಂದಃ**

1989 ನೇ ಸಾಲಿನಲ್ಲಿ ನನ್ನ ಅಜ್ಜ ಗಣಪತಿ ಪೆಡ್ನೇಕರ ಇವರು ಮೃತಪಟ್ಟಿರುತ್ತಾರೆಂದರೆ ಸರಿ. ನಾನು ಆ ಸಮಯದಲ್ಲಿ ಮಗು ಇದ್ದೆನು ಎಂದರೆ ಸರಿ. 2005 ನೇ ಸಾಲಿನಲ್ಲಿ ನನ್ನ ಅಜ್ಜಿ ಮೃತಪಟ್ಟಿರುತ್ತಾರೆಂದರೆ ಸರಿ. ನನ್ನ ಅಜ್ಜಿಯು ನನ್ನ ಅಜ್ಜನ ಮರಣದ ನಂತರ ದಾವಾ ಅನುಸೂಚಿತ 2 ನೇ ಆಸ್ತಿಯ ಮನೆಯಲ್ಲಿ ಒಬ್ಬಳೇ ವಾಸವಾಗಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ನನ್ನ ದೊಡ್ಡಪ್ಪನಾದ ಮೃತ ವಿಷ್ಣು ಪೆಡ್ನೇಕರ ಇವರ ಜೊತೆ ವಾಸಮಾಡುತ್ತಿದ್ದರು ಎಂದು ಸಾಕ್ಷ್ಯ ನುಡಿಯುತ್ತಾರೆ. ದಾವಾ ಅನುಸೂಚಿತ 2 ನೇ ಆಸ್ತಿಯಲ್ಲಿ ಒಟ್ಟು ನಾಲ್ಕು ಬೆಡ್ ರೂಮ , ಒಂದು ಹಾಲ್ , ಒಂದು ಅಡುಗೆ ಮನೆ ಮತ್ತು ದೇವರ ಕೋಣೆ ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಸದರಿ ಮನೆಯು 3 ಬೆಡ್ ರೂಮ್ , ಒಂದು ಹಾಲ್ , ಒಂದು ಸ್ಟೋರ ರೂಮ್ , ಒಂದು ಪೂಜಾ ಕೋಣೆ ಹಾಗೂ ಎರಡು ಅಡುಗೆ ಮನೆಗಳನ್ನು ಹೊಂದಿದ್ದು , ಆ ಪೈಕಿ ಒಂದು ಅಡುಗೆ ಮನೆಯನ್ನು ವಿಷ್ಣು ಪೆಡ್ನೇಕರ ಮತ್ತು ಆತನ ಕುಟುಂಬಸ್ಥರು ಉಪಯೋಗಿಸುತ್ತಿದ್ದರೆಂದು ಸಾಕ್ಷ್ಯ ನುಡಿಯುತ್ತಾರೆ.

ನನ್ನ ಅಜ್ಜಿಯ ಜೀವಿತಾವಧಿಯಲ್ಲಿ ದಾವಾ ಅನುಸೂಚಿತ 2 ನೇ ಆಸ್ತಿಯಲ್ಲಿ ತನಗಿದ್ದಂತಹ ಹಕ್ಕನ್ನು ನನ್ನ ಅಜ್ಜಿಯು ಮೃತ ಸುರೇಶ ಪೆಡ್ನೇಕರ ಅಂದರೆ 1 ನೇ ಪ್ರತಿವಾದಿಯ ಗಂಡನಿಗೆ ಬಿಟ್ಟುಕೊಟ್ಟಿರುತ್ತಾರೆಂದರೆ ಸರಿಯಲ್ಲ. ನನ್ನ ಅಜ್ಜಿಯ ಮರಣಾನಂತರ ನನ್ನ ತಂದೆ ಹಾಗೂ ನನ್ನ ತಂದೆಯ ಸಹೋದರರು ದಾವಾ ಅನುಸೂಚಿತ 2 ನೇ ಆಸ್ತಿಯಲ್ಲಿದ್ದ ತಮ್ಮ ಹಕ್ಕನ್ನು ಮೃತ ಸುರೇಶ ಪೆಡ್ನೇಕರ ಇವರಿಗೆ ಬಿಟ್ಟುಕೊಟ್ಟಿರುತ್ತಾರೆಂದರೆ ಸರಿಯಲ್ಲ. ಮೃತ ಪೆಡ್ನೇಕರ ಎಂದರೆ 1 ನೇ ಪ್ರತಿವಾದಿಯ ಗಂಡನನ್ನು ಕೇವಲ ಕುಟುಂಬದ ವ್ಯವಹಾರಗಳನ್ನು ನೋಡಿಕೊಳ್ಳುವ ಸಲುವಾಗಿ ಮತ್ತು ಹಿರಿಯ ಸಹೋದರನಾದ ವಿಷ್ಣು ಪೆಡ್ನೇಕರ ಇವರ ಸಹಾಯದೊಂದಿಗೆ ಕುಟುಂಬದ ಮ್ಯಾನೇಜರ ಆಗಿ ನೇಮಿಸಲಾಗಿತ್ತು ಹೊರತುಪಡಿಸಿ ದಾವಾ ಆಸ್ತಿಯಲ್ಲಿ ಎಲ್ಲರಿಗೂ ಸಮಾನ ಹಕ್ಕು ಇತ್ತು ಎಂದು ಸಾಕ್ಷಿ ಉತ್ತರಿಸುತ್ತಾರೆ. ನನ್ನ ಅಜ್ಜಿಯ ಜೀವಿತಾವಧಿಯಲ್ಲಿ ದಾವಾ ಅನುಸೂಚಿತ 2 ನೇ ಆಸ್ತಿಗೆ ಸಂಬಂಧಪಟ್ಟಂತೆ ಪಾಲು ವಿಭಾಗ ಅಗಿದ್ದು , ನನ್ನ ಅಜ್ಜಿ, ನನ್ನ ತಂದೆ ಮತ್ತು ನನ್ನ ತಂದೆಯ

ಸಹೋದರರು ಸದರಿ ದಾವಾ ಅನುಸೂಚಿತ 2 ನೇ ಆಸ್ತಿಯಲ್ಲಿದ್ದ ತಮ್ಮ ಹಕ್ಕನ್ನು ಸುರೇಶ ಪೆಡ್ನೇಕರ ಇವರಿಗೆ ಬಿಟ್ಟು ಕೊಡುವ ಮೂಲಕ ವಿಭಾಗ ಮಾಡಿಕೊಂಡಿದ್ದರೆಂದರೆ ಸರಿಯಲ್ಲ. ಸದರಿ ದಾವಾ ಅನುಸೂಚಿತ 2 ನೇ ಆಸ್ತಿಯು ತನ್ನ ಹಿಸ್ಸೆಗೆ ಬಂದ ನಂತರ ಮೃತ ಸುರೇಶ ಪೆಡ್ನೇಕರ ಇವರು ತನ್ನ ಸ್ವಂತ ದುಡಿಮೆಯಿಂದ ಮನೆಯನ್ನು ನಿರ್ಮಾಣ ಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ ಮನೆಯಲ್ಲಿ ಮೇಲಿನ ಮಹಡಿಯನ್ನು ಸುರೇಶ ಪೆಡ್ನೇಕರ ಇಟ್ಟುಕೊಂಡಿದ್ದು , ನೆಲ ಅಂತಸ್ತಿನ ಕಟ್ಟಡವನ್ನು ಕುಟುಂಬದ ಎಲ್ಲಾ ಸದಸ್ಯರಿಗೆ ಉಪಯೋಗಿಸಲು ಬಿಡುತ್ತಿದ್ದರೆಂದರೆ ಸರಿಯಲ್ಲ. ನಮ್ಮ ಕುಟುಂಬದ ನಡುವಿನ ಸಂಬಂಧವನ್ನು ಚೆನ್ನಾಗಿ ಮುಂದುವರಿಸಿಕೊಂಡು ಹೋಗುವ ಉದ್ದೇಶದಿಂದ ಮಾತ್ರ ನಾವು ಹಬ್ಬ ಹರಿದಿನಗಳಲ್ಲಿ ಸದರಿ ಮನೆಯಲ್ಲಿ ಒಟ್ಟಾಗಿ ಸೇರುತ್ತಿದ್ದೆವು ಹೊರತುಪಡಿಸಿ ಸದರಿ ದಾವಾ ಅನುಸೂಚಿತ 2 ನೇ ಆಸ್ತಿಯಲ್ಲಿ ಮತ್ತು ಅದರಲ್ಲಿರುವ ಮನೆಯಲ್ಲಿ 1 ರಿಂದ 3 ನೇ ಪ್ರತಿವಾದಿ ಹೊರತುಪಡಿಸಿ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಇರುವುದಿಲ್ಲಾ ಎಂದರೆ ಸರಿಯಲ್ಲ. ಸದರ ದಾವಾ ಅನುಸೂಚಿತ 2 ನೇ ಆಸ್ತಿಯಲ್ಲಿದ್ದ ಮನೆಗೆ ಸಂಬಂಧಪಟ್ಟಂತೆ ತೆರಿಗೆ , ವಿದ್ಯುತ್ಚಕ್ತಿ ಬಿಲ್ಲುಗಳನ್ನು ತುಂಬುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ 2012 ರಿಂದ 2017 ರ ವರೆಗೆ ಮಾತ್ರ ತೆರಿಗೆ ಹಾಗೂ ವಿದ್ಯುತ್ಚಕ್ತಿ ಬಿಲ್ಲುಗಳನ್ನು ಸುರೇಶ ಪೆಡ್ನೇಕರ ತುಂಬಿದ್ದು , 2017 ರ ನಂತರ ನನ್ನ ತಂದೆ ತುಂಬಿರುತ್ತಾರೆ ಅಲ್ಲದೇ ದಾವಾ ಶೆಡ್ಯೂಲ 1 ನೇ ಆಸ್ತಿಯಲ್ಲಿ ಕೃಷಿ ಹಾಗೂ ಸಿಗಡಿ ಕೃಷಿಯನ್ನು ಮಾಡುತ್ತಿದ್ದು , ಅದರಿಂದ ಬರುತ್ತಿದ್ದ ಉತ್ಪಾದನೆಯನ್ನು 1 ನೇ ಪ್ರತಿವಾದಿಯ ಗಂಡ ಉಪಯೋಗಿಸುತ್ತಿದ್ದರೆಂದು ಸಾಕ್ಷ್ಯ ನುಡಿಯುತ್ತಾರೆ. ದಾವಾ ಶೆಡ್ಯೂಲ ಅನುಕ್ರಮಸಂಖ್ಯೆ 1 ನೇ ಆಸ್ತಿಯಲ್ಲಿ ಯಾವುದೇ ಕೃಷಿ ಅಥವಾ ಸಿಗಡಿ ಕೃಷಿ ಮಾಡುತ್ತಿರಲಿಲ್ಲಾ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ದಾವಾ ಅನುಸೂಚಿತ 2 ನೇ ಆಸ್ತಿಯನ್ನು ಮಾರಾಟ ಮಾಡುವ ತಯಾರಿಯಲ್ಲಿದ್ದು , ನಾನು ಈ ದಾವೆಯನ್ನು ಮಾಡಲು ಕಾರಣ ಉಂಟಾಗಿರುತ್ತದೆಂದು ನನ್ನ ವಾದ ಪತ್ರದಲ್ಲಿ ಸುಳ್ಳು ಹೇಳಿಸಿ ಬರೆಸಿರುತ್ತೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹೆಸರಿನಲ್ಲಿ ದಾವಾ ಅನುಸೂಚಿತ 2 ನೇ ಆಸ್ತಿಯು ಇದ್ದರೂಸಹ ಅವರು ನಮ್ಮ ಯಾವುದೇ ಕುಟುಂಬದ ಸದಸ್ಯರಿಗೆ ಸದರಿ ದಾವಾ ಅನುಸೂಚಿತ 2 ನೇ ಆಸ್ತಿಗೆ ಬಂದುಹೋಗಲು ಯಾವುದೇ ತೊಂದರೆ ಮಾಡಿರುವುದಿಲ್ಲಾ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ 1 ನೇ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲದಿದ್ದರೂ ಸಹಿತ ಆಕೆ ದಾವಾ ಆಸ್ತಿಯ ಕಂದಾಯ ಮತ್ತು ನಗರ ಸಭೆ ದಾಖಲೆಗಳಲ್ಲಿ ತನ್ನ ಹೆಸರನ್ನು ಮೋಸದಿಂದ

ನಮೂದಿಸಿಕೊಂಡಿರುತ್ತಾರೆಂದು ಸಾಕ್ಷ್ಯ ನುಡಿಯುತ್ತಾರೆ. 2-3 ತಿಂಗಳ ಹಿಂದೆ ನನ್ನ ತಂದೆ ಸದರಿ ದಾವಾ ಅನುಸೂಚಿತ 2 ನೇ ಆಸ್ತಿಯ ಮನೆಗೆ ಬಂದು ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ತಂದೆಯನಡುವಿನ ಸಂಬಂಧ ಚೆನ್ನಾಗಿಲ್ಲದಿರುವುದರಿಂದ ಅವರಿಗೆ ಒತ್ತಾಯ ಮಾಡಿ ಅವರ ಅಧಿಕಾರ ಪತ್ರವನ್ನು ನಾನು ಪಡೆದುಕೊಂಡು ಈ ದಾವೆಯಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿತ 2 ನೇ ಆಸ್ತಿಯಲ್ಲಿ ನನ್ನ ತಂದೆ ಮತ್ತು ಅವರ ಸಹೋದರರು ತಮಗಿದ್ದ ಹಕ್ಕನ್ನು ನನ್ನ ಅಜ್ಜಿಯ ಜೀವಿತಾವಧಿಯಲ್ಲಿ 1 ನೇ ಪ್ರತಿವಾದಿಯ ಗಂಡ ಸುರೇಶ ಪೆಡ್ನೇಕರ ಇವರಿಗೆ ಬಿಟ್ಟುಕೊಟ್ಟಿದ್ದರಿಂದ ಸದರಿ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲಾ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಸದರಿ ಆಸ್ತಿಯು ನನ್ನ ತಂದೆ ಮತ್ತು ಅವರ ಸಹೋದರರ ಸಾಮೂಹಿಕ ಹೆಸರಿನಲ್ಲಿ ಇದ್ದು ಯಾವುದೇ ವಿಭಾಗ ಆಗಿರುವುದಿಲ್ಲಾ ಮತ್ತು ಎಲ್ಲರಿಗೂ ಸಮಾನ ಹಕ್ಕು ಹಿತಾಸಕ್ತಿ ಇರುತ್ತದೆಂದು ಸಾಕ್ಷ್ಯ ನುಡಿಯುತ್ತಾರೆ. ಸಾಕ್ಷಿ ಸ್ವತಃ ಮುಂದುವರಿದು ನನ್ನ ಅಜ್ಜಿ 2005 ರಲ್ಲಿ ಮೃತಪಟ್ಟಿದ್ದು , ಯಾವುದೇ ಪಾಲು ವಿಭಾಗ ಅವರ ಜೀವಿತಾವಧಿಯಲ್ಲಿ ಆಗಿರುವುದಿಲ್ಲಾ, ನನ್ನ ತಂದೆ ಮತ್ತು ಇನ್ನಿತರ ಸಹೋದರರು ತಮ್ಮ ಹಕ್ಕನ್ನು ಸುರೇಶ ಪೆಡ್ನೇಕರ ಇವರಿಗೆ ಬಿಟ್ಟುಕೊಟ್ಟಿರುತ್ತಾರೆಂದರೆ ಸರಿಯಲ್ಲ. ಈ ದಾವೆ ವಜಾ ಮಾಡಲು ಯೋಗ್ಯವಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲ –**

**(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ,**

**ಸಿವಿಲ್ ನ್ಯಾಯಾಧೀಶರು ಕಾರವಾರ**